**ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಚಿಂಚೋಳಿ**

**ಸಿ.ಸಿ ಸಂಖ್ಯೆ.*ನಂ.1402/2024***

**ಫಿರ್ಯಾಧಿದಾರಃ** ಸರಕಾರದ ಪರವಾಗಿ ಸುಲೇಪೇಟ ಪೋಲಿಸ ಠಾಣೆ

// ವಿರುದ್ದ //

**ಆರೋಪಿತರು** : ರಾಜು ಮತ್ತು ಇತರರು

ಆ ರೋ ಪ ಣೆ

ನಾನು **ಶ್ರೀ ದತ್ತುಕುಮಾರ ಜವಳಕರ. B.B.A. L.L.B (Hons) L.L.M.** ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ**,** ಈ ಕೆಳಕೆಂಡ ಆರೋಪಿತರು**.**

| | |
|---|---|
| 1. | ರಾಜು ತಂದೆ ರಾಮಚಂದ್ರ ಜಾಧವ,<br>35 ವರ್ಷ, ಉಃ ಒಕ್ಕಲುತನ. |
| 2. | ತಾರಾಸಿಂಗ ತಂದೆ ರೂಪ್ಲಾ ಜಾಧವ,<br>50 ವರ್ಷ, ಉಃ ಆರೋಗ್ಯ ಇಲಾಖೆ ನೌಕರ. |
| 3. | ಸಂಜು ತಂದೆ ಶೆಟ್ಟಿ ರಾಠೋಡ, 35 ವರ್ಷ,<br>ಉಃ ಚಾಲಕ ಕೆಲಸ. |
| 4. | ಅಜಯ ತಂದೆ ಪ್ರಕಾಶ ಜಾಧವ, 18 ವರ್ಷ,<br>ಉಃ ವಿದ್ಯೆಭ್ಯಾ ಸ. |
| 5. | ಜೇತಾಲಾಲ ತಂದೆ ತಾರಾಸಿಂಗ ಜಾಧವ,<br>21 ವರ್ಷ, ಉಃ ವಿದ್ಯಾ ಭ್ಯಾ ಸ. |
| 6 | ಸುನೀಲ ತಂದೆ ನೂರು ಜಾಧವ, 23 ವರ್ಷ,<br>ಉಃ ವಿದ್ಯಾ ಭ್ಯಾ ಸ.<br>ಎಲ್ಲರ ವಾಸಃ ರುಸ್ತಂಪೂರ ತಾಂಡಾ. |

**ಆದ ನಿಮ್ಮ ವಿರುದ್ದ ದೋಷಿಸುವ ಆರೋಪಣೆ ಎನೆಂದರೆ,**

ದಿನಾಂಕಃ 20-06-2023 ರಂದು ರಾತ್ರಿ 11-00 ಗಂಟೆಯ ಸುಮಾರಿಗೆ ಸುಲೇಪೇಟ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ರುಸ್ತಾಂಪೂರ

ತಾಂಡಾದಲ್ಲಿ ಚಾಸಾ-1 ಶ್ರೀಮತಿ ಶಕುನಾಬಾಯಿ ಮತ್ತು ಚಾಸಾ-4 ಸುನೀಲ ನೇದ್ದವರು ತಮ್ಮ ಮಕ್ಕಳೊಂದಿಗೆ ಕಮಿಟಿ ಹಾಲ್ ನಲ್ಲಿ ಇದ್ದಾಗ ಆರೋಪಿತರೆಲ್ಲರೂ ಹೊಡೆಯುವ ಏಕೋದ್ದೇಶದಿಂದ ಗುಂಪು ಕಟ್ಟಿಕೊಂಡು ಬಂದ ಕಾರಣ, ಈ ಮೂಲಕ ಭಾ.ದಂ.ಸಂ.ಕಲಂ.143 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತಿಯೆಂದು.

2. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿತರಾದ ನೀವು ಚಾಸಾ-1 ಶ್ರೀಮತಿ ಶಕುನಾಬಾಯಿ ಮತ್ತು ಚಾಸಾ-4 ಸುನೀಲ ನೇದ್ದವರಿಗೆ ನೇದ್ದವರಿಗೆ ಹೊಡೆಯುವ ಏಕೋದ್ದೇಶದಿಂದ ಬಂದು ಸದರಿ ಅಕ್ರಮ ಕೂಟದ ಸದಸ್ಯರಾಗಿದ್ದರಿಂದ ಭಾ.ದಂ.ಸಂ.ಕಲಂ.147 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

3. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿತರಾದ ನೀವು ಚಾಸಾ-1 ಶ್ರೀಮತಿ ಶಕುನಾಬಾಯಿ ಮತ್ತು ಚಾಸಾ-4 ಸುನೀಲ ನೇದ್ದವರಿಗೆ ಹೊಡೆಯುವ ಏಕೋದ್ದೇಶದಿಂದ ಬಂದು ದೊಂಬಿ ಎಬ್ಬಿಸಿ, ಆ ಮೂಲಕ ಭಾ.ದಂ.ಸಂ.ಕಲಂ. 148 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

4. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿತರೆಲ್ಲರೂ ಚಾಸಾ-1 ಶ್ರೀಮತಿ ಶಕುನಾಬಾಯಿ ಮತ್ತು ಚಾಸಾ-4 ಸುನೀಲ ನೇದ್ದವರಿಗೆ ಏ ಸುನ್ಯ ಲವಡಿ ಮಗನೆ ನೀನು ಕಮಿಟಿ ಹಾಲ್‌ನಿಂದ ಹೊರಗೆ ಬಾ ಚೋದಿ ಮಗನೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಆ

ಮೂಲಕ ಭಾ.ದಂ.ಸಂ.ಕಲಂ. 504 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

5. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ತಾರಾಸಿಂಗ 2ನೇ ಆರೋಪಿ ನೀನು ಚಾಸಾ-1 ಶ್ರೀಮತಿ ಶಕುನಾಬಾಯಿ ನೇದ್ದವಳ ಎದೆಯ ಮೇಲಿನ ಕುಪ್ಪಸಗಳನ್ನು ಹಿಡಿದು ಎಳೆದಾಡಿ ಹಾಗೂ ಜಡೆ ಹಿಡಿದು, ಸಂಜು 3ನೇ ಆರೋಪಿ ಮತ್ತು ಅಜಯ 4ನೇ ಆರೋಪಿ ಚಾಸಾ-1 ಶ್ರೀಮತಿ ಶಕುನಾಬಾಯಿ ನೇದ್ದವಳ ಮೈ ಕೈ ಮುಟ್ಟಿ ಕೈ ಹಿಡಿದು ಜಾಗ್ಗಾಡಿ ಮಾನಭಂಗ ಮಾಡಲು ಪ್ರಯತ್ನಿಸಿದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ. 354 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

6. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ರಾಜು 1ನೇ ಆರೋಪಿ ಚಾಸಾ-1 ಶ್ರೀಮತಿ ಶಕುನಾಬಾಯಿ ನೇದ್ದವಳಿಗೆ ಕಟ್ಟಿಗೆಯಿಂದ ತಲೆಯ ಮೇಲೆ ಹೊಡೆದು ರಕ್ತಗಾಯವನ್ನುಂಟು ಮಾಡಿದ ಕಾರಣ ಆ ಮೂಲಕ ಭಾ.ದಂ.ಸಂ.ಕಲಂ. 324 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

7. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಅಜಯ 4ನೇ ಆರೋಪಿ, ಜೇತಾಲಾಲ 5ನೇ ಆರೋಪಿ ಮತ್ತು ಸುನೀಲ 6ನೇ ಆರೋಪಿ ಚಾಸಾ-4 ಸುನೀಲ ನೇದ್ದವನಿಗೆ ಕೈಯಿಂದ ಹೊಡೆದು ನೆಲಕ್ಕೆ ಉರುಳಿಸಿ ಕಾಲಿನಿಂದ ಒದ್ದಿದ್ದ ಕಾರಣ ಆ ಮೂಲಕ ಭಾ.ದಂ.ಸಂ.ಕಲಂ. 323

ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

8. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿತರೆಲ್ಲರೂ ಚಾಸಾ-1 ಶ್ರೀಮತಿ ಶಕುನಾಬಾಯಿ ಮತ್ತು ಚಾಸಾ-4 ಸುನೀಲ ನೇದ್ದವರಿಗೆ ನೀವು ಕಮಿಟಿ ಹಾಲ್ (ಧರ್ಮಶಾಲೆ) ಯನ್ನು ಖಾಲಿ ಮಾಡದೇ ಇದ್ದರೇ ನಿಮಗೆ ಖಾಲಸ ಮಾಡುತ್ತೇವೆ ಅಂತಾ ಜೀವ ಬೆದರಿಕೆ ಹಾಕಿದ ಕಾರಣ ಆ ಮೂಲಕ ಭಾ.ದಂ.ಸಂ.ಕಲಂ. 506 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಪ್ರಶ್ನೆ-1: ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ?
ಉತ್ತರಃ ಅರ್ಥವಾಯಿತು

ಪ್ರಶ್ನೆ-2: ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಎದುರಿಸುವಿರೊ?
ಉತ್ತರಃ ವಿಚಾರಣೆಯಾಗಬೇಕು

ದಿನಾಂಕಃ 11.02.2025.
ಸ್ಥಳ : ಚಿಂಚೋಳಿ

(ಶ್ರೀ ದತ್ತಕುಮಾರ ಜವಳಕರ)
C/c ಹೆಚ್ಚುವರಿ ಪ್ರ.ದ.ನ್ಯಾ.ದಂಡಾಧಿಕಾರಿ,
ಚಿಂಚೋಳಿ.